ದಿನಾಂಕಃ **09-03-2023** **O.S. No. 12/2017 ಪಿ ಡಬ್ಲ್ಯು1**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು.

<u>ಪ್ರತಿವಾದಿಯರ ಪರವಾಗಿ ಪಾಟೀ ಸವಾಲು ಶ್ರೀ ಎನ್ ಜಿ ಪಿ ವಕೀಲರಿಂದಃ-</u>

ವಾದ ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತು. ವಾದಿ ವಾದ ಪತ್ರದಲ್ಲಿರುವ ಅಂಶಗಳನ್ನು ವಕೀಲರಿಗೆ ಹೇಳಿ ಈ ದಾವೆಯನ್ನು ದಾಖಲಿಸಿದ್ದಾರೆ. ವಾದ ಪತ್ರದಲ್ಲಿರುವ ಮಾಹಿತಿಯನ್ನು ಅವರ ವಕೀಲರಿಗೆ 1 ರಿಂದ 5 ನೇ ವಾದಿಯರು ಕೊಟ್ಟರು. ವಕೀಲರಿಗೆ ಅವರು ಮಾಹಿತಿ ಕೊಡುವಾಗ ನಾನು ಇರಲಿಲ್ಲ. ವಾದಿಯರು ಹೇಳಿದ ಮೇಲೆ ನನಗೆ ಗೊತ್ತಾಯಿತು. ವಾದಿಯರು ನನ್ನ ಸಂಬಂಧಿಕರಲ್ಲ. ವಾದಿಯರು ಬೇರೆ ಜಾತಿಯವರು, ನಾವು ಬೇರೆ ಜಾತಿಯವರು. 1 ಮತ್ತು 2 ನೇ ಪ್ರತಿವಾದಿಯರು 1 ನೇ ವಾದಿಯ ಮಕ್ಕಳು. 3 ನೇ ವಾದಿ ಈ ದಿನ ನ್ಯಾಯಾಲಯದಲ್ಲಿ ಹಾಜರಿಲ್ಲ. 3 ನೇ ವಾದಿ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆಂದರೆ ಸರಿಯಲ್ಲ. 1 ಮತ್ತು 3 ನೇ ವಾದಿಯವರ ಆರೋಗ್ಯ ಸರಿಯಲ್ಲ. ಉಳಿದ ವಾದಿಯರು ಬೇರೆ ಊರಿನಲ್ಲಿದ್ದಾರೆ. 1 ಮತ್ತು 3 ನೇ ವಾದಿಯವರಿಗೆ ಆರೋಗ್ಯ ಸರಿಯಿಲ್ಲ ಎಂದು ನಾನು ದಾಖಲಾತಿಗಳನ್ನು ಕೊಟ್ಟಿಲ್ಲ. 1 ರಿಂದ 5 ನೇ ವಾದಿಯರು ಆರೋಗ್ಯವಾಗಿದ್ದಾರೆಂದರೆ ಸರಿಯಲ್ಲ. ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರು ಒಟ್ಟಿಗೆ ಕೂಡಿ ಈ ವ್ಯಾಜ್ಯವನ್ನು ದಾಖಲಿಸಿದ್ದಾರೆಂದರೆ ಸರಿಯಲ್ಲ. ಈ ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಮತ್ತು 3 ನೇ ವಾದಿ ತೆಗೆಸಿದ್ದೇವೆ. ನಾನು ಈ ವ್ಯಾಜ್ಯದ ದಾಖಲೆಗಳನ್ನು ತೆಗೆಸಿ ಬ್ರೋಕರ್ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಲೋಕಪ್ಪ ಅಂದರೆ 1 ನೇ ವಾದಿಯ ಗಂಡ ಈಗ ಇಲ್ಲ. ಲೋಕಪ್ಪ ಮೂಲತಃ ನಿಂಬೆಗುಂದಿಯವರು. ನಮ್ಮ ವಾದ ಪತ್ರದಲ್ಲಿ ಲೋಕಪ್ಪನ ಊರು ದೊಡ್ಡೆತ್ತಳ್ಳಿ ಎಂದು ಹೇಳಿದ್ದೇವೆಂದರೆ ಸರಿಯಲ್ಲ. ಲೋಕಪ್ಪ ಮೂಲತಃ ದೊಡ್ಡೆತ್ತಳ್ಳಿ, ನ್ಯಾಮತಿ ತಾಲೂಕು, ದಾವಣಗೆರೆ ಜಿಲ್ಲೆ. ಬಸಪ್ಪನ ಅಣ್ಣ ತಮ್ಮಂದಿರು ನನಗೆ ಗೊತ್ತಿಲ್ಲ. ಬಸಪ್ಪನ ವಂಶವೃಕ್ಷ ದೊಡ್ಡೆತ್ತಳ್ಳಿಯಲ್ಲಿದೆ ಎಂದರೆ ಸರಿಯಲ್ಲ. ಬಸಪ್ಪ ನಿಂಬೆಗುಂದಿಯಲ್ಲಿ ವಾಸವಾಗಿದ್ದರು ಎಂದು ವಾಸದ ದೃಢೀಕರಣ ಪತ್ರವನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಬಸಪ್ಪನಿಗೆ ಇಬ್ಬರು ಮಕ್ಕಳು. ಅವರ ಹೆಸರು ನಾಗಮ್ಮ ಮತ್ತು 1 ನೇ ವಾದಿಯ ಗಂಡ ಲೋಕಪ್ಪ. ನಾಗಮ್ಮ ಮೂಲತಃ ನಿಂಬೆಗುಂದಿಯವರು. ನಾಗಮ್ಮ ಮೂಲತಃ ದೊಡ್ಡತ್ತಳ್ಳಿಯವರು ಎಂದರೆ ಸರಿಯಲ್ಲ. ನಾಗಮ್ಮನ ಗಂಡನ ಹೆಸರು ಕೊಟ್ರಪ್ಪ. ನಾಗಮ್ಮನ ಗಂಡನ ಹೆಸರು ನಾನು ಹಾಜರುಪಡಿಸಿದ ವಂಶವೃಕ್ಷದಲ್ಲಿ ಹೇಳಿಲ್ಲ. ಕೊಟ್ರಪ್ಪ ದ್ಯಾವಪ್ಪನ ಮಗ. ದ್ಯಾವಪ್ಪನಿಗೆ ಒಬ್ಬನೇ ಮಗ. ದ್ಯಾವಪ್ಪನಿಗೆ ಇಬ್ಬರು ಮಕ್ಕಳು ಎನ್ನುವುದು ಸರಿಯಲ್ಲ. ಭರಮಪ್ಪ ಯಾರೆಂದು ನನಗೆ ಗೊತ್ತಿಲ್ಲ.
( ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.